ದಿನಾಂಕಃ **04.12.2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ ಸವಾಲುಃ ಶ್ರೀ ಸಿ ಜಿ ಆರ್ ವಕೀಲರಿಂದಃ-

ನಾನು ಗ್ರಾಮೀಣ ಅಂಚೆ ಇಲಾಖೆ ನೌಕರ. ನಾನು 25 ವರ್ಷಗಳಿಂದ ಸದರಿ ಕರ್ತವ್ಯ ನಿರ್ವಹಿಸಿಕೊಂಡು ಬರುತ್ತಿದ್ದೇನೆ. ನನಗೆ ಈಗ 60 ವರ್ಷ ವಯಸ್ಸು. ನಾನು 25 ವರ್ಷಗಳಿಂದ ಒಂದೇ ಕಡೆ ಕರ್ತವ್ಯ ನಿರ್ವಹಿಸಿಕೊಂಡು ಬರುತ್ತಿದ್ದೇನೆ. ನಾನು ಈಗಲೂ ಅಲ್ಲಿಯೇ ಕೆಲಸ ಮಾಡಿಕೊಂಡಿರುತ್ತೇನೆ. ನಾನು ಮತ್ತು ನನ್ನ ಸಹೋದರ ಪ್ರತ್ಯೇಕವಾಗಿ ವಾಸವಾಗಿರುತ್ತೇವೆ ಎಂದರೆ ಸರಿ. ನನ್ನ ತಂದೆಯವರು 2012 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಾಯಿಯವರು 2015 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ಮದುವೆಯಾಗಿ 25 ವರ್ಷಗಳಾಯಿತು. ಮದುವೆಯಾದ ಒಂದು ವರ್ಷದ ನಂತರ ನಾನು ಪ್ರತ್ಯೇಕವಾಗಿ ವಾಸವಾಗಿರುತ್ತೇನೆ. ನಾನು ಬೇರೆ ಹೋದ ನಂತರ ನನ್ನ ತಂದೆ ಮತ್ತು 1 ನೇ ಪ್ರತಿವಾದಿ ಒಟ್ಟಿಗೆ ವಾಸವಾಗಿದ್ದರು ಎಂದರೆ ಸರಿ. ದಾವಾ ಐಟಂ ನಂ 1 ಮತ್ತು 2 ರ ಆಸ್ತಿಗಳು ನನ್ನ ತಂದೆಯವರಿಗೆ ಸರ್ಕಾರದಿಂದ ಮಂಜೂರಾದ ಆಸ್ತಿಗಳು ಎಂದರೆ ಸರಿ. ದಾವಾ ಐಟಂ ನಂ 3 ರ ಆಸ್ತಿಯನ್ನು ನನ್ನ ತಂದೆಯವರು ಕ್ರಯಕ್ಕೆ ಖರೀದಿಸಿರುತ್ತಾರೆ ಎಂದರೆ ಸರಿ. ಐಟಂ ನಂ 1 ರ ಆಸ್ತಿ ನನ್ನ ತಂದೆಯವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಐಟಂ ನಂ 3 ರ ಆಸ್ತಿಯೂ ಸಹ ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ನಾನು ಈಗ ವಾಸ ಮಾಡುತ್ತಿರುವ ಮನೆ ನನ್ನ ಹೆಂಡತಿ ಹೆಸರಿನಲ್ಲಿ ಇರುತ್ತದೆ. ಸದರಿ ಮನೆ ಆರ್ ಸಿ ಸಿ ಮನೆಯಾಗಿರುತ್ತದೆ ಎಂದರೆ ಸರಿ. ಅದರ ವಿಸ್ತೀರ್ಣ 20 x 17 ಅಡಿ ಆಗಿರುತ್ತದೆ. ಸದರಿ ಮನೆಯನ್ನು 2013 ರಲ್ಲಿ ನಿರ್ಮಾಣ ಮಾಡಿರುತ್ತೇನೆ. ಸದರಿ ನಿವೇಶನವನ್ನು ನನ್ನ ತಂದೆಯವರು ನನಗೆ

ನೀಡಿರುತ್ತಾರೆ. ಸಾಕ್ಷಿ ಮುಂದುವರೆದು ಅಣ್ಣ ತಮ್ಮಂದಿರಿಗೆ ಇಬ್ಬರಿಗೂ ಹಂಚಿಕೊಟ್ಟಿರುತ್ತಾರೆ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ದಾವಾ ಐಟಂ ನಂ 1 ರಿಂದ 3ರ ಆಸ್ತಿಯನ್ನು ನನ್ನ ತಂದೆಯ ಜೀವಿತಕಾಲದಲ್ಲಿ ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ನಾವೂ ಸಹ ಸಹಾಯ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. ನನ್ನ ತಂದೆ ಮರಣ ಹೊಂದುವ ಸಮಯದವರೆಗೂ 1ನೇ ಪ್ರತಿವಾದಿ ಜೊತೆ ವಾಸವಾಗಿದ್ದರು ಎಂದರೆ ಸರಿ. ದಾವಾ ಐಟಂ ನಂ 1 ರಿಂದ 3ರ ಆಸ್ತಿಗಳನ್ನು ನನ್ನ ತಂದೆಯವರು 1ನೇ ಪ್ರತಿವಾದಿಯ ಮಕ್ಕಳಾದ ಬಿ ವಿ ಚಂದನ ಮತ್ತು ಬಿ ವಿ ನಂದನ ರವರಿಗೆ ದಿಃ 24.02.2011 ರಂದು ಕಡೂರು ಉಪ ನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಾಯಿತ ವಿಲ್ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಐಟಂ ನಂ 4ರ ಖಾತೆಯು ನನ್ನ ತಂದೆ ಹೆಸರಿನಲ್ಲಿರುತ್ತದೆ. ಸದರಿ ಮನೆಯಲ್ಲಿ ನಾನು ಮತ್ತು 1ನೇ ಪ್ರತಿವಾದಿ ಇಬ್ಬರೂ ವಾಸವಾಗಿರುತ್ತೇವೆ. ದಾವಾ ಐಟಂ ನಂ 1 ರಿಂದ 3ರ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಆಗಿರುವ ಕಾರಣ ಹಾಗೂ ಅವರು ಸದರಿ ಆಸ್ತಿಗಳನ್ನು 1ನೇ ಪ್ರತಿವಾದಿಯ ಮಕ್ಕಳಿಗೆ ವಿಲ್ ಮಾಡಿರುವ ಕಾರಣ ಸದರಿ ಆಸ್ತಿಗಳ ಮೇಲೆ ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲಾ ಎಂದರೆ ಸರಿಯಲ್ಲ. ನನ್ನ ತಂದೆಯವರ ಯೋಗಕ್ಷೇಮವನ್ನು 1ನೇ ಪ್ರತಿವಾದಿ ನೋಡುತ್ತಿದ್ದ ಕಾರಣ ಅವರ ಮಕ್ಕಳ ಹೆಸರಿಗೆ ವಿಲ್ ಬರೆದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ಕೊನೆಯ ಕಾಲದಲ್ಲಿ 1ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ದಾವಾ ಐಟಂ ನಂ 4ರ ಆಸ್ತಿಯನ್ನು ನನ್ನ ತಂದೆಯವರು 1ನೇ ಪ್ರತಿವಾದಿಗೆ ನೀಡಿರುವ ಕಾರಣ ಸದರಿ ಆಸ್ತಿಯಲ್ಲಿ ಅವರೇ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ 1 ರಿಂದ 3ರ ಆಸ್ತಿಗಳನ್ನು 1ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೂ 4 ಎಕರೆ ಆಸ್ತಿ ಬಿಟ್ಟು ಕೊಟ್ಟಿರುತ್ತಾರೆ ಅದರ ಮೇಲೆ ನನಗೂ ಹಕ್ಕು ಅಧಿಕಾರ ಇದೆ ಎಂದು ನುಡಿಯುತ್ತಾರೆ.

2ನೇ ಪ್ರತಿವಾದಿಯೊಂದಿಗೆ ನಾನು ಅನೂನ್ಯವಾಗಿದ್ದೇನೆ ಎಂದರೆ ಸರಿ. 2ನೇ ಪ್ರತಿವಾದಿಯ ಮದುವೆಯನ್ನು ನನ್ನ ತಂದೆಯವರೇ ಮಾಡಿರುತ್ತಾರೆ ಎಂದರೆ ಸರಿ. 2ನೇ ಪ್ರತಿವಾದಿಯ ಮದುವೆಯನ್ನು ನನ್ನ ತಂದೆಯವರೇ ಸಾಕಷ್ಟು ಚಿನ್ನಾಭರಣ ಕೊಟ್ಟು ಅದ್ದೂರಿಯಾಗಿ ನೆರವೇರಿಸಿರುತ್ತಾರೆ ಎಂದರೆ ನನ್ನ ಮಾವನೂ ( ತಾಯಿಯ ತಮ್ಮ ) ಸಹ ಮದುವೆಗೆ ಸಹಾಯ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳಾಗಿರುವ ಕಾರಣ ಅವರ ಇಚ್ಛೆಯಂತೆ ವಿಲೇವಾರಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೂ ಆ ಆಸ್ತಿಗಳಲ್ಲಿ ಹಕ್ಕು ಇರುತ್ತದೆ ಎಂದು ನುಡಿಯುತ್ತಾರೆ. ನನಗೆ ಬರುತ್ತಿದ್ದ ವೇತನದಿಂದ ನನ್ನ ತಂದೆಯವರಿಗೂ ಯಾವತ್ತೂ ಸಹಾಯ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರ ಆಸ್ಪತ್ರೆ ಖರ್ಚು ವೆಚ್ಚಗಳನ್ನು 1ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ನಾನೂ ಸಹ ನೋಡಿಕೊಳ್ಳುತ್ತಿದ್ದೆ ಎಂದು ನುಡಿಯುತ್ತಾರೆ. ನನ್ನ ಮದುವೆಯ ನಂತರ ನಾನು ಪ್ರತ್ಯೇಕ

ವಾಸವಿದ್ದ ಕಾರಣ ನನ್ನ ತಂದೆಯ ಯೋಗಕ್ಷೇಮವನ್ನು ನಾನು ನೋಡಿಕೊಳ್ಳುತ್ತಿರಲಿಲ್ಲ ಎಂದರೆ ಸಾಕ್ಷಿಯು ನನ್ನ ಮದುವೆ ನಂತರ 1 ನೇ ಪ್ರತಿವಾದಿಯ ಹೆಂಡತಿಗೂ ನನ್ನ ಹೆಂಡತಿಗೂ ಸರಿ ಬಾರದೇ ಇರುವ ಕಾರಣ ನಾನು ಪ್ರತ್ಯೇಕವಾಗಿ ವಾಸವಿದ್ದೆ ಎಂದು ನುಡಿಯುತ್ತಾರೆ. ನನ್ನ ತಂದೆಯವರಿಗೂ ನನ್ನ ಹೆಂಡತಿಗೂ ಸರಿ ಬಾರದೇ ಇದ್ದ ಕಾರಣ ನಾನು ಪ್ರತ್ಯೇಕವಾಗಿ ವಾಸವಿದ್ದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನನ್ನ ತಂದೆಯ ಸ್ವ ಯಾರ್ಜಿತ ಆಸ್ತಿಯಾಗಿದ್ದ ಕಾರಣ ಹಾಗೂ ಸದರಿ ಆಸ್ತಿಗಳನ್ನು ಈಗಾಗಲೇ ವಿಲ್ ಬರೆದಿರುವ ಕಾರಣ ನನಗೆ ದಾವಾ ಆಸ್ತಿಗಳ ಮೇಲೆ ಹಕ್ಕು ಅಧಿಕಾರ ಇಲ್ಲಾ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.